ಅನುಬಂಧ -3

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 512
2. ಸದಸ್ಯರ ಹೆಸರು : ಶ್ರೀ ಸ್ಯೆಯದ್ ಮುಧೀರ್ ಅಗಾ
3. ಉತ್ತರಿಸಬೇಕಾದ ದಿನಾಂಕ : 21-02-2018

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಮನಗರ ಜಿಲ್ಲೆ ಚೆನ್ನಪಟ್ಟಣ ತಾಲ್ಲೂಕಿನ ಕಣ್ವ ಜಲಾಶಯ ಹಾಗೂ ಮಂಚನಬೆಲೆ ಜಲಾಶಯಗಳು ನಿರ್ಮಾಣವಾದಾಗ ಇದ್ದ ನೀರು ಶೇಖರಣೆಯ ಗರಿಷ್ಟ ಪ್ರಮಾಣವೆಷ್ಟು ಹಾಗೂ ಈಗಿನ ಪ್ರಮಾಣವೆಷ್ಟು ; (ಸಂಪೂರ್ಣ ವಿವರ ನೀಡುವುದು)	1. **ಕಣ್ವ ಜಲಾಶಯ:** ಕಣ್ವ ಜಲಾಶಯವು 1946 ರಲ್ಲಿ ನಿರ್ಮಾಣವಾದಾಗ ಒಟ್ಟಾರೆ ನೀರಿನ ಗರಿಷ್ಠ ಶೇಖರಣಾ ಸಾಮರ್ಥ್ಯ 0.809 ಟಿ.ಎಂ.ಸಿ. ಜಲಾಶಯದ ನಿರ್ಮಾಣ ಸಮಯದಲ್ಲಿ ನಿರ್ಮಾಣವಾಗಿದ್ದ ಸೈಫನ್ ಕೋಡಿಯ ಜೊತೆಗೆ 2006 ರಿಂದ 2009 ರ ಅವಧಿಯಲ್ಲಿ ಕ್ರೆಸ್ಟ್ ಗೇಟ್ ಸಹಿತವಾದ ಕಾಂಕ್ರೀಟ್ ಸ್ಪಿಲ್‌ವೇ ನಿರ್ಮಾಣ ಮಾಡಲಾಗಿರುತ್ತದೆ. ಇದರ ಜೊತೆ ಹಿಂದಿನ ಸೈಫನ್ ಕೋಡಿಯೂ ಸಹ ಸುಸ್ಥಿತಿಯಲ್ಲಿದ್ದು, ಪ್ರಸ್ತುತ ಶೇಖರಣಾ ಸಾಮರ್ಥ್ಯದಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ. 2. **ಮಂಚನಬೆಲೆ ಜಲಾಶಯ:** ಮಂಚನಬೆಲೆ ಜಲಾಶಯವನ್ನು 1996 ರಲ್ಲಿ ಪೂರ್ಣಗೊಳಿಸಲಾಗಿದ್ದು, ಇದರ ಒಟ್ಟಾರೆ ನೀರಿನ ಗರಿಷ್ಠ ಶೇಖರಣಾ ಸಾಮರ್ಥ್ಯ 1.222 ಟಿ.ಎಂ.ಸಿ.ಯಾಗಿದೆ. ಜಲಾಶಯ ನಿರ್ಮಾಣವಾದಾಗಿನಿಂದ ಇದುವರೆವಿಗೂ ಶೇಖರಣಾ ಸಾಮರ್ಥ್ಯದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.
ಆ	ಈ ಎರಡು ಜಲಾಶಯಗಳಲ್ಲಿ ಹಲವಾರು ವರ್ಷಗಳಿಂದ ತುಂಬಿರುವ ಹೂಳನ್ನು ತೆಗೆಯಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	1. ಕಣ್ವ ಜಲಾಶಯದಲ್ಲಿ ಗಮನಿಸಬಹುದಾದ ಪ್ರಮಾಣದ ಹೂಳು ಶೇಖರಣೆಯಾಗಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ ಪ್ರಸ್ತುತ ಜಲಾಶಯದಲ್ಲಿ ಹೂಳು ತೆಗೆಯುವ ಪ್ರಸ್ತಾವನೆ ಇರುವುದಿಲ್ಲ. 2. ಮಂಚನಬೆಲೆ ಜಲಾಶಯದ ಮೇಲ್ಭಾಗದಲ್ಲಿ ಸುಮಾರು 13.00 ಕಿ.ಮೀ.ಗಳ ಅಂತರದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯವಿದ್ದು, ಜಲಾಶಯಕ್ಕೆ ಹರಿಯುವ ನೀರಿನಲ್ಲಿ ಸವಕಳಿ ಕಡಿಮೆಯಿರುವುದರಿಂದ ಜಲಾಶಯದಲ್ಲಿ ಗಮನಿಸಬಹುದಾದ ಪ್ರಮಾಣದ ಹೂಳು ಶೇಖರಣೆಯಾಗಿರುವುದು ಕಂಡುಬಂದಿರುವುದಿಲ್ಲ. ಆದ್ದರಿಂದ ಪ್ರಸ್ತುತ ಜಲಾಶಯದಲ್ಲಿ ಹೂಳು-ತೆಗೆಯುವ ಪ್ರಸ್ತಾವನೆ ಇರುವುದಿಲ್ಲ.
ಇ	ಕಣ್ವ ಜಲಾಶಯಕ್ಕೆ ಏತ ನೀರಾವರಿ ಮೂಲಕ ನೀರು ತುಂಬಿಸುವ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು. ಈ ಯೋಜನೆಗೆ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವೆಷ್ಟು; ಖರ್ಚು ಮಾಡಿದ ಹಣವೆಷ್ಟು; ಕಾಮಗಾರಿಗಳ ಇತ್ತೀಚಿನ ಪ್ರಗತಿಯ ಸಂಪೂರ್ಣ ಮಾಹಿತಿ ನೀಡುವುದು.	ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನ ಕಣ್ವ ಜಲಾಶಯ ಮತ್ತು ಇತರೆ 17 ಕೆರೆಗಳನ್ನು ತುಂಬಿಸುವ ಕಣ್ವ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಫೆಬ್ರವರಿ 2013 ರಲ್ಲಿ ಪ್ರಾರಂಭಿಸಿ ಏಪ್ರಿಲ್-2015 ರಲ್ಲಿ ಪೂರ್ಣಗೊಳಿಸಲಾಗಿದ್ದು, ಸದರಿ ಯೋಜನೆಯಿಂದ ಕಣ್ವ ಜಲಾಶಯ ಹಾಗೂ ಇನ್ನಿತರೆ 17 ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. ಕಣ್ವ ಏತ ನೀರಾವರಿಯ ಸಮಗ್ರ ಯೋಜನೆಗೆ ರೂ.181.13 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಬಿಡುಗಡೆಯಾದ ಪೂರ್ಣ ಅನುದಾನವನ್ನು ಖರ್ಚು ಮಾಡಲಾಗಿದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ಯೋಜನೆಯನ್ನು ಚಾಲನೆಗೊಳಿಸಲಾಗಿದೆ.
ಈ	ಈ ಯೋಜನೆಯ ಕಾಮಗಾರಿಯನ್ನು ನಿರ್ವಹಿಸಲು ಯಾವ ಸಂಸ್ಥೆ / ಗುತ್ತಿಗೆದಾರರಿಗೆ ಎಷ್ಟು ಮೊತ್ತಕ್ಕೆ ಟೆಂಡರ್	ಈ ಯೋಜನೆಯ ಕಾಮಗಾರಿಯನ್ನು ನಿರ್ವಹಿಸಲು ಮೆ॥ ಕೋಯ & ಕಂ., ಹೈದರಾಬಾದ್ ಮತ್ತು ಮೆ॥ ದೀಪಕ್ ಕೇಬಲ್ಸ್ ಲಿ (ಜೆ.ವಿ), ಗುತ್ತಿಗೆದಾರರಿಗೆ ರೂ.180.78 ಕೋಟಿಗಳ ಮೊತ್ತಕ್ಕೆ ವಹಿಸಲಾಗಿರುತ್ತದೆ.

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th colspan="4">ಉತ್ತರಗಳು</th></tr>
<tr><td rowspan="3"></td><td rowspan="3">ವಹಿಸಲಾಗಿದೆ; ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳಾವುವು? (ಸಂಪೂರ್ಣ ವಿವರ ನೀಡುವುದು)</td><td colspan="4">ಈ ಕಾಮಗಾರಿಯ ಟೆಂಡರ್‌ನಲ್ಲಿ ಕೆಳಕಂಡ ಸಂಸ್ಥೆಗಳು ಭಾಗವಹಿಸಿದ್ದವು</td></tr>
<tr><td>ಹೆಸರು</td><td>M/s Koya and Company Hyderabad&M/s: Deepak Cables (India) Ltd,(JV)</td><td>M/s IVRCL Infrastructure and project Ltd.</td><td>M/s Kirlolskar Brothers Ltd.</td></tr>
<tr><td>ನಮೂದಿಸಿದ್ದ ಮೊತ್ತ</td><td>Rs.180.78 Cr. 8.42% below</td><td>Rs.193.25 Cr 2.10% below</td><td>Rs.187.67 Cr 4.92% below</td></tr>
</table>

ಸಂಖ್ಯೆ:ಜಸಂಇ 18 ಎಸ್‌ಎಲ್‌ಎ 2018

(ಎಂ.ಬಿ.ಪಾಟೀಲ)
ಜಲ ಸಂಪನ್ಮೂಲ ಸಚಿವರು

ಅನುಬಂಧ - 4

ಸರ್ಕಾರದ ಉಪ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸೇವೆಗಳು)
DEPUTY SECRETARY TO GOVT.
Water Resources Department (Services)

ದೂರವಾಣಿ ಕಛೇರಿ : ೨೨೨೫೧೬೧೧
TELEPHONE OFFICE : 22251611
ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, ಬೆಂಗಳೂರು - ೫೬೦ ೦೦೧
KARNATAKA GOVT. SECRETARIAT
VIKASA SOUDHA
BENGALURU - 560 001

ಅ.ಸ.ಪ. ಸಂಖ್ಯೆ :
D.O. No.

ದಿನಾಂಕ / DATED: ....

ಅ.ಸ.ಪತ್ರ ಸಂಖ್ಯೆ: ಜಸಂಇ 12 ಡಬ್ಲ್ಯೂಎಲ್‌ಎ 2018 ದಿ: 20.02.2018

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ಅಣ್ಣಯ್ಯ) ರವರು ಕೋರಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 661(918)ರ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ ರವರ ಪತ್ರ ಸಂಖ್ಯೆ: ಎಲ್‌ಸಿಕ್ಯೂ:918:134ನೇಅ:2018, ದಿನಾಂಕ 12.02.2018.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮ ನಿರ್ದೇಶನ ಹೊಂದಿದವರು) ರವರು ಕೋರಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 661(918)ಅನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸದರಿ ವಿಷಯವು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿರುವುದರಿಂದ, ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 661(918) ಅನ್ನು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಲಾಗಿದೆ. ಈ ಪ್ರಶ್ನೆಗೆ ತಮ್ಮ ಇಲಾಖೆಯಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಉತ್ತರ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಗೌರವಾದರಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಹಿ)

ಇವರಿಗೆ:

ಶ್ರೀ ಮಹೇಂದ್ರ ಜೈನ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ.

ಪ್ರತಿಯನ್ನು ಮಾಹಿತಿಗಾಗಿ ಇವರಿಗೆ ಕಳುಹಿಸಿದೆ:-

1. ಕಾರ್ಯದರ್ಶಿ ಕರ್ನಾಟಕ ವಿಧಾನ ಪರಿಷತ್, ವಿಧಾನ ಪರಿಷತ್ ಸಚಿವಾಲಯ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ), ಜಲಸಂಪನ್ಮೂಲ ಇಲಾಖೆ.

21/2/18

21.2.18 UD